# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ರವರು ಕೃಷಿ ನಿರ್ದೇಶಕರು ನೀಡಿರುವ ದಂಡನಾದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಓದಲಾಗಿದೆ:**

1. ಕೃಷಿ ನಿರ್ದೇಶಕರ ಇಲಾಖಾ ಆದೇಶ ಸಂ: ಸಿಬ್ಬಂದಿ-1/ವಿಚಾರಣೆ-4/31/ಮೈಸೂರು/2008-09. ದಿನಾಂಕ : 15-06-2011.
2. ಶ್ರೀ ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ(ನಿ). ಇವರ ಮೇಲ್ಮನವಿ ದಿನಾಂಕ: 14-09-2011.
3. ಸರ್ಕಾರದ ಪತ್ರ ಸಂಖ್ಯೆ: ಕೃಇ 59 ಕೃಪವಿ 2011. ದಿನಾಂಕ : 04-11-2011.
4. ಕೃಷಿ ಆಯುಕ್ತರ ಪತ್ರ ಸಂ: ಸಿಬ್ಬಂದಿ-1/ವಿಚಾರಣೆ-4/31/ಮೈ/2007-08. ದಿನಾಂಕ: 21-01-2012.

*********

**ಪ್ರಸ್ತಾವನೆ:**

ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ರವರು ರೈತ ಸಂಪರ್ಕ ಕೇಂದ್ರ, ಬೆಟ್ಟದಪುರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಬಿತ್ತನೆ ಬೀಜ ಮಾರಾಟ ಹಾಗೂ ಕೃಷಿ ಪರಿಕರಗಳ ಮಾರಾಟದ ರೈತರ ವಂತಿಕೆ ಹಣ ರೂ. 2,28,124/-ಗಳನ್ನು ಬ್ಯಾಂಕಿಗೆ ಜಮಾ ಮಾಡದೇ ದುರುಪಯೋಗ ಪಡಿಸಿಕೊಂಡಿರುವುದಾಗಿಯೂ ಹಾಗೂ ರಿಯಾಯಿತಿ ದರದ ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ರೂ. 91,915/-ಗಳ ಸರ್ಕಾರದ ಸಹಾಯಧನವನ್ನು ಕ್ಲೈಮು ಮಾಡಲು ಸಕಾಲದಲ್ಲಿ ಮಾಹಿತಿಯನ್ನು ಒದಗಿಸಲು ವಿಫಲರಾಗಿರುತ್ತಾರೆಂಬ ಆಪಾದನೆಗಳಿಗೆ ಸಂಬಂದಿಸಿದಂತೆ ಅವರ ಮೇಲೆ ಇಲಾಖಾ ವಿಚಾರಣೆ ನಡೆಸಲು ಶ್ರೀ ಹೆಚ್.ವಿ. ರಾಮಚಂದ್ರರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು, ಅದರಂತೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿ ವಿಚಾರಣೆ ನಡೆಸಿ ನೀಡಿದ ವರದಿಯಂತೆ ಸದರಿಯವರ ಮೇಲಿನ ಆರೋಪಗಳು ಸಾಬೀತಾಗಿರುವುದರಿಂದ ಮೇಲೆ ಕ್ರಮ ಸಂ.(1)ರಲ್ಲಿ ಓದಲಾದ ತಮ್ಮ ಕಛೇರಿ ಆದೇಶದಲ್ಲಿ ಕೃಷಿ ನಿರ್ದೇಶಕರು ಈ ಕೆಳಕಂಡಂತೆ ದಂಡನೆ ವಿಧಿಸಿ ಆದೇಶಿಸಿರುತ್ತಾರೆ.

1. ಸದರಿ ಅಧಿಕಾರಿಯವರು ತಾತ್ಕಾಲಿಕ ದುರುಪಯೋಗ ಪಡಿಸಿಕೊಂಡ ಸರ್ಕಾರದ ಹಣ ರೂ. 1,61,103/- ಕ್ಕೆ ದುರುಪಯೋಗ ಪಡಿಸಿಕೊಂಡ ದಿನಾಂಕದಿಂದ ಪಾವತಿಸುವ ದಿನಾಂಕದವರೆಗೆ 8% ಬಡ್ಡಿ ವಸೂಲಿ ಮಾಡಲು.
2. ಸದರಿಯವರಿಂದ ಪಾವತಿಯಾಗಬೇಕಾದ ಹಣ ರೂ. 67,021/- ನ್ನು ದುರುಪಯೋಗ ಪಡಿಸಿಕೊಂಡ ದಿನಾಂಕದಿಂದ ಪಾವತಿಸುವ ದಿನಾಂಕವರೆಗೆ 8% ರ ಬಡ್ಡಿ ದರದಲ್ಲಿ ವಸೂಲಿ ಮಾಡಲು.
3. ಸದರಿಯವರ ನಿಲಂಬನಾ ಅವಧಿ ದಿನಾಂಕ 14-2-2008 ರಿಂದ 28-2-2008 ರವರೆಗಿನ ಅವಧಿಯನ್ನು ನಿಲಂಬನಾ ಅವಧಿಯೆಂದೇ ಪರಿಗಣಿಸಲು.
4. ಪಿಂಚಣಿಯಲ್ಲಿ 5% ರಷ್ಟು ಒಂದು ವರ್ಷದ ಮಟ್ಟಿಗೆ ತಡೆಹಿಡಿಯಲು.

--2--

ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ರವರು ಕೃಷಿ ನಿರ್ದೇಶಕರು ಹೊರಡಿಸಿರುವ ಮೇಲ್ಕಂಡ ದಂಡನಾದೇಶದ ವಿರುದ್ಧ ಮೇಲೆ ಕ್ರಮ ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿರುತ್ತಾರೆ.

1. " ತಾವು ಗ್ರೂಪ್–ಎ ಕಿರಿಯ ಶ್ರೇಣಿ ಅಧಿಕಾರಿಯಾಗಿದ್ದು, ತಮಗೆ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿರುತ್ತದೆ. ಆದರೆ ತಮ್ಮ ಮೇಲೆ ಕೃಷಿ ನಿರ್ದೇಶಕರು ಶಿಸ್ತು ಪ್ರಾಧಿಕಾರವಾಗಿ ಇಲಾಖಾವಿಚಾರಣೆಯನ್ನು ನಡೆಸಿರುವುದು ಅವರ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ."

2. ಸರ್ಕಾರವು ನಿಗಧಿಪಡಿಸಿರುವ ಗುರಿಯನ್ನು ತಲುಪಲು ಮೇಲಾಧಿಕಾರಿಗಳು ಒತ್ತಾಯದಿಂದ ಕೃಷಿ ಪರಿಕರಗಳನ್ನು ಸಾಲನೀಡುವ ಆಧಾರದ ಮೇಲೆ ಮಾರಾಟ ಮಾಡಿಸಿರುತ್ತಾರೆ. ಆ ಸಮಯದಲ್ಲಿ ರೈತರು ಪರಿಕರಗಳನ್ನು ತಕ್ಷಣವೇ ಹಣವನ್ನು ನೀಡದೆ ಕೆಲವು ತಿಂಗಳುಗಳ ನಂತರ ಆರ್ಥಿಕ ವರ್ಷ ಮುಗಿದ ಮೇಲೆ ಹಣವನ್ನು ನೀಡಿರುತ್ತಾರೆ.

3. ಆಡಿಟ್ ಆಕ್ಷೇಪಣೆಗೆ ತಡವಾಗಿ ಹಣ ಪಾವತಿಸುವುದು ಕಾರಣವೇ ಹೊರತು, ತಾವು ಯಾವುದೇ ಹಣವನ್ನು ದುರುಪಯೋಗ ಮಾಡಿಕೊಂಡಿಲ್ಲವೆಂದು ಆದ್ದರಿಂದ ತಾತ್ಕಾಲಿಕ ಹಣ ದುರುಪಯೋಗಕ್ಕೆ ತಾವು ಹೊಣೆಗಾರರಲ್ಲವೆಂದು ತಿಳಿಸಿರುತ್ತಾರೆ.

4. ಕೃಷಿ ನಿರ್ದೇಶಕರು ಯಾವುದೇ ಆಧಾರವಿಲ್ಲದೆ ವಿಚಾರಣಾವರದಿಯನ್ನು ಅಂಗೀಕರಿಸಿ ತಮ್ಮಿಂದ ಶೇ. 8ರ ಬಡ್ಡಿಯೊಂದಿಗೆ ರೂ. 67,021/– ಹಾಗೂ ರೂ. 1,61,103/–ಹಣ ವಸೂಲಾತಿಗೆ ಆದೇಶಿಸಿರುವ ಆದೇಶವು ನಿರಾಧಾರವಾಗಿದೆ. ಹಾಗೂ ಕರ್ನಾಟಕ ನಾಗರಿಕ ಸೇವಾ 214 ರಡಿ ತಮಗೆ ದಂಡನೆ ವಿಧಿಸಲು ಕೃಷಿ ಆಯುಕ್ತರಿಗೆ ಅಧಿಕಾರವಿರುವುದಿಲ್ಲ.

5. ತಾವು ಯಾವುದೇ ಹಣವನ್ನು ದುರುಪಯೋಗ ಪಡಿಸಿಕೊಂಡಿಲ್ಲವೆಂದು, ಕೃಷಿ ಪರಿಕರ ಪಡೆದ ರೈತರು ತಡವಾಗಿ ಹಣ ಪಾವತಿಸಿರುತ್ತಾರೆ. ಹಾಗೂ ತಾವು ನೀಡಿದ ರಕ್ಷಣಾ ಹೇಳಿಕೆಯನ್ನು ವಿಚಾರಣಾವರದಿಯಲ್ಲಿ ಪರಿಗಣಿಸಿರುವುದಿಲ್ಲ ಆದ್ದರಿಂದ ತಮ್ಮಿಂದ ಹಣ ವಸೂಲಾತಿಗೆ ಆದೇಶಿಸಿರುವ ಆದೇಶವು ನಿರಾಧಾರವಾಗಿದೆ.

ಸದರಿ ಅಧಿಕಾರಿಯವರು ಸಲ್ಲಿಸಿದ ಮೇಲ್ಮನವಿಯ ಬಗ್ಗೆ ಮೇಲೆ ಕ್ರಮ ಸಂ.(3)ರಲ್ಲಿ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರ ಅಭಿಪ್ರಾಯವನ್ನು ಕೋರಲಾಗಿತ್ತು. ಕೃಷಿ ಆಯುಕ್ತರು ಕ್ರಮ ಸಂ.(4)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮಕೈಗೊಂಡು ವಿಚಾರಣಾಧಿಕಾರಿಗಳನ್ನು ನೇಮಿಸಿ, ವಿಚಾರಣಾಧಿಕಾರಿಗಳು ಸಲ್ಲಿಸಿದ ವಿಚಾರಣಾವರದಿಯನ್ವಯ, ಸದರಿ ಅಧಿಕಾರಿಯ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ 2ನೇ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಿ, ಅವರ ಹೇಳಿಕೆಗಳನ್ನು ಪಡೆದು ಪರಿಶೀಲಿಸಲಾಗಿ, ಸದರಿ ಅಧಿಕಾರಿಯವರ ವಿರುದ್ಧದ ಆರೋಪಗಳು

--3--

ಸತ್ಯಾಂಶದಿಂದ ಕೂಡಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಸದರಿ ಅಧಿಕಾರಿಗಳು ಕೃಷಿ ನಿರ್ದೇಶಕರು ಹೊರಡಿಸಿದ ದಂಡನಾದೇಶವು ನಿರಾಧಾರವಾಗಿರುವುದು ಎಂದು ಹೇಳಿರುವುದು ಸಮಂಜಸವಾಗಿರುವುದಿಲ್ಲ ಹಾಗೂ ಸದರಿ ಅಧಿಕಾರಿಗಳು ಸಲ್ಲಿಸಿರುವ ಮೇಲ್ಮನವಿಯಲ್ಲಿ ರೈತರು ಪಡೆದ ಪರಿಕರಗಳಿಗೆ ತಡವಾಗಿ ಹಣ ಸಂದಾಯ ಮಾಡಿರುವುದಾಗಿ ತಿಳಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಇವರು 'ಎ' ದರ್ಜೆಯ ಅಧಿಕಾರಿಗಳಾಗಿರದೆ 'ಬಿ' ದರ್ಜೆಯ ಅಧಿಕಾರಿಗಳಾಗಿರುತ್ತಾರೆ. ಸದರಿ ಅಧಿಕಾರಿಗಳ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದ ಯಾವುದೇ ಅಂಶಗಳು ಇರುವುದಿಲ್ಲ. ಆದುದರಿಂದ ಇಲಾಖೆಯ ದಂಡನಾದೇಶವನ್ನು ಸ್ಥಿರೀಕರಿಸುವಂತೆ ಕೋರಿರುತ್ತಾರೆ.

ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ಇವರು ತಮಗೆ ಕೃಷಿ ಆಯುಕ್ತರು ವಿಧಿಸಿದ ದಂಡನೆಯ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಕೃಷಿ ನಿರ್ದೇಶಕರ ಅಭಿಪ್ರಾಯದೊಂದಿಗೆ ಪರಿಶೀಲಿಸಲಾಗಿ ಅವರು ತಮ್ಮ ಮೇಲ್ಮನವಿಯನ್ನು ಸಮರ್ಥಿಸುವಂತ ಯಾವುದೇ ದಸ್ತಾವೇಜುಗಳನ್ನು ಲಭ್ಯ ಮಾಡದಿರುವುದರಿಂದ ಮತ್ತು ಗ್ರೂಪ್-ಬಿ ವೃಂದದ ಸದರಿ ಅಧಿಕಾರಿಯವರಿಗೆ ದಂಡನೆ ವಿಧಿಸುವ ಶಿಸ್ತು ಪ್ರಾಧಿಕಾರ ಇಲಾಖಾ ಮುಖ್ಯಸ್ಥರೇ ಆಗಿರುತ್ತಾರೆಂಬುದನ್ನು ಗಣನೆಗೆ ತೆಗೆದುಕೊಂಡ ಸರ್ಕಾರ ಅವರಿಗೆ ಇಲಾಖಾ ಮುಖ್ಯಸ್ಥರಾದ ಕೃಷಿ ನಿರ್ದೇಶಕರು ವಿಧಿಸಿದ ದಂಡನಾದೇಶವನ್ನು ಸ್ಥಿರೀಕರಿಸಿ, ಅವರ ಮೇಲ್ಮನವಿಯನ್ನು ಪುರಸ್ಕರಿಸದಿರಲು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 59 ಕೃಪವಿ 2011**
**ಬೆಂಗಳೂರು, ದಿನಾಂಕ: 06-11-2012**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಡಿ. ಎನ್. ಹುಚ್ಚೇಗೌಡ ಕೃಷಿ ಅಧಿಕಾರಿ (ನಿವೃತ್ತ) ಇವರು ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಕೃಷಿ ನಿರ್ದೇಶಕರು ವಿಧಿಸಿದ ದಂಡನಾದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯನ್ನು ಪರಿಶೀಲಿಸಿದ ಸರ್ಕಾರ, ಸದರಿ ಮೇಲ್ಮನವಿಯನ್ನು ಪುರಸ್ಕರಿಸದೇ ತಿರಸ್ಕರಿಸಿ, ಕೃಷಿ ಆಯುಕ್ತರು ವಿಧಿಸಿದ ದಂಡನೆಯನ್ನು ಸ್ಥಿರೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:-**

1. ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.